

# ಗೊರಟಿಗೆ

## ಔಷಧ, ಸೌಂದರ್ಯಗಳ ಆಗರ

**ಕಡುನೀಲಿ, ನೇರಳೆ, ಬಿಳಿ, ತಿಳಿ ಗುಲಾಬಿ, ಕೆಂಪು, ಹಳದಿ ಮುಂತಾದ ಬಣ್ಣಗಳಿಂದ ಗಿಡದ ತುಂಬಾ ಹೂವು ಬಿಡುವ ಗೊರಟಿಗೆ ಕೈತೋಟದಲ್ಲಿ ಎದ್ದುಕಾಣುವಂತೆ ಕಂಗೊಳಿಸುತ್ತದೆ.**

■ ಸುಮನಾ ಜಿ. ಪ್ರಸಾದ್



ಬಣ್ಣ, ನೋಟಗಳಲ್ಲಿ ಅತ್ಯಂತ ಸುಂದರವಾಗಿರುವ ಗೊರಟಿಗೆ ಘಮಲಿನ ವಿಷಯಕ್ಕೆ ಬಂದಾಗ ಗೌಣವೇ. ಸುಗಂಧ ಬೀರದೆ ಇದ್ದರೂ ಕಣ್ಣಿಗೆ ಆಕರ್ಷಕವಾಗಿ ಕಾಣುವ ಗೊರಟಿಗೆ ಪೂಜೆಗೆ, ಅಲಂಕಾರಕ್ಕೆ, ಮುಡಿಯಲು – ಹೀಗೆ ನಾನಾ ವಿಧದಲ್ಲಿ ಉಪಯೋಗಕ್ಕೆ ಬರುತ್ತದೆ. ಆಕಾರದಲ್ಲಿ ತುಸು ಕರವೀರ ಪುಷ್ಪವನ್ನೇ ಹೋಲುವ ಸುಂದರ ಹೂವು ಈ ಗೊರಟಿಗೆ.

ಕಡುನೀಲಿ, ನೇರಳೆ, ಬಿಳಿ, ತಿಳಿ ಗುಲಾಬಿ, ಕೆಂಪು, ಹಳದಿ ಮುಂತಾದ ಬಣ್ಣಗಳಿಂದ ಗಿಡದ ತುಂಬಾ ಹೂವು ಬಿಡುವ ಗೊರಟಿಗೆ ಕೈತೋಟದಲ್ಲಿ ಎದ್ದುಕಾಣುವಂತೆ ಕಂಗೊಳಿಸುತ್ತದೆ.

ಗೊರಟೆ, ಗೊರಟಿಗೆ, ಸ್ಪಟಿಕ ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುವ ಈ ಹೂವು ಬೆಳಿಗ್ಗೆ ಬೇಗನೆ ಅರಳುತ್ತದೆ. ಸೂರ್ಯನ ಕಡುಬಿಸಿಲು ಇದ್ದರೂ ಬೇಗನೆ ಬಾಡುವುದಿಲ್ಲ.

ಇದೇ ಹೆಸರಿನಿಂದ ಕರೆಯುವ ಗೊರಟೆ ಹೂವುಗಳ ಇನ್ನೊಂದು ಪ್ರಬೇಧದಲ್ಲಿ ಹಳದಿ ಬಣ್ಣದ ಹೂವುಗಳೂ ಅರಳುತ್ತವೆ. ಹಳದಿ ಗೊರಟೆ ಗಿಡದಲ್ಲಿ ಮುಳ್ಳುಗಳಿರುತ್ತವೆ. ಗೊರಟೆ ಹೂವುಗಳು ಇಡೀ ಹೂತೋಟಕ್ಕೆ ವಿಶೇಷ ಮೆರುಗು ನೀಡುವಂಥವು. ಇದು ಪೊದೆಗಳಂತೆ ಬೆಳೆಯುವ ಸಸ್ಯ. ಎಲೆಗಳು ಕಡು ಹಸುರು ಮತ್ತು ಎಲೆಯ ಕೆಳಭಾಗ ತಿಳಿಹಸುರು ಬಣ್ಣದ್ದಾಗಿದೆ. ಸಂಸ್ಕೃತದಲ್ಲಿ ಈ ಗಿಡಕ್ಕೆ 'ಸಹಚಾರ, ಸರ್ರೈಕಾ' ಮುಂತಾದ ಹೆಸರುಗಳಿವೆ. ಬರ್ಲೇರಿಯ ಕ್ರಿಸ್ಟಾಟ ಎಂಬ ವೈಜ್ಞಾನಿಕ ಹೆಸರಿರುವ ಇದು 'ಅಕಾಂತಸೀ' ಸಸ್ಯ ಕುಟುಂಬಕ್ಕೆ ಸೇರಿದೆ. ಗಿಡ ಪೊದೆಯಾಕಾರದಲ್ಲಿದ್ದು ಸುಮಾರು 60ರಿಂದ 100 ಸೆ.ಮೀ. ಎತ್ತರ ಬೆಳೆಯುತ್ತದೆ. ಐದು ಸೆ.ಮೀ. ಉದ್ದದ ಹೂವು ಬಿಡುತ್ತದೆ. ಹಣ್ಣುಗಳು 1.5 ಸೆ.ಮೀ. ಇರುತ್ತದೆ.

### ಔಷಧೀಯ ಗುಣಗಳು

ಗೊರಟಿಗೆ ಗಿಡ ಔಷಧೀಯ ಗುಣಗಳ ಆಗರ. ಇದರ ನಿರ್ವಹಣೆಗೆ ಹೆಚ್ಚಿನ ಶ್ರಮ ಬೇಕಾಗಿಲ್ಲ. ರಸಗೊಬ್ಬರ, ಸದಾ ನೀರು, ನೆರಳು ವಿಶೇಷ ಆರೈಕೆ ಬಯಸದ ವಿಶಿಷ್ಟ ಸಸ್ಯ ಹೂವಿನ ಸೌಂದರ್ಯದ ಜತೆಗೆ ಔಷಧಕ್ಕೂ ಬಳಕೆಯಾಗುತ್ತದೆ. ಗೊರಟಿಗೆ ಗಿಡದ ಎಲೆಯನ್ನು ಹಲ್ಲುನೋವು ಮತ್ತು ಸಂಧಿವಾತ ನಿವಾರಣೆಗೆ ಬಳಸುತ್ತಾರೆ. ಈ ಗಿಡದ ಬೇರು ಸಹ ಕೀಲು ನೋವು ನಿವಾರಣೆಗೆ ಸಹಕಾರಿ. ಗೊರಟಿಗೆ ಗಿಡದ ಎಲೆಯನ್ನು ಕೆಮ್ಮು, ಕಿವಿನೋವು ಮತ್ತು ಹಿಮ್ಮಡಿ ಒಡೆದ ನೋವುಗಳಿಗೆ ಪರಿಹಾರವಾಗಿ ಬಳಸುವುದಿದೆ.

ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಯಥೇಚ್ಛವಾಗಿ ಹೂವು ಬಿಡುತ್ತದೆ. ಉಳಿದ ಕಾಲಗಳಲ್ಲಿ ಹೂವು ಬಿಡುವ ಸಂಖ್ಯೆ ಕಡಿಮೆ. ಮನೆಯಂಗಳದಲ್ಲಿ ಇರಲೇಬೇಕಾದ ಈ ಗಿಡ ಕೆಲವೆಡೆ ಅಳಿವಿನ ಅಂಚಿನಲ್ಲಿ ಇದ್ದು, ಜತನವಾಗಿ ಕಾಪಾಡಬೇಕಾದ ಅನಿವಾರ್ಯತೆಯೂ ಇದೆ. ■